1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರ: 1372/2023

ಚಾಸಾ: 2 ಪ್ರಾಸಾ:1

ದಿನಾಂಕ: 19.12.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ರಾಘವೇಂದ್ರ |
| ತಂದೆಯ ಹೆಸರು | : | ಸಿದ್ದ ಪೂಜಾರಿ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಪೊಲೀಸ್ ಪೇದೆ |
| ವಾಸ ಸ್ಥಳ | : | ಗಂಗೊಳ್ಳಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>

ನಾನು 20-08-2021 ರಿಂದ ಇಲ್ಲಿಯವರೆಗೂ ಗಂಗೊಳ್ಳಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ: 25-05-20223 ರಂದು ಸಂಜೆ 5-30 ಗಂಟೆಗೆ ನಾನು ಠಾಣೆಯಲ್ಲಿ ಇದ್ದಾಗ ಚಾಸಾ-1 ರವರು ಠಾಣೆಗೆ ಬಂದು ಚಾಸಾ-10 ರವರಿಗೆ ಕುಂದಾಪುರ ತಾಲೂಕು ಗುಜ್ಜಾಡಿ ಗ್ರಾಮದ 2ನೇ ಆರೋಪಿ ಮನೆಯಲ್ಲಿ ಅಕ್ರಮವಾಗಿ ಸರಕಾರದ ಉಚಿತ ಅನ್ನ ಭಾಗ್ಯ ಯೋಜನೆಯ ಅಕ್ಕಿಯನ್ನು ದಾಸ್ತಾನು ಇರಿಸಿರುವುದಾಗಿ ಸಿಬ್ಬಂದಿಯವರನ್ನು ನೇಮಿಸುವಂತೆ ಹಾಗೂ ದಾಳಿಗೆ ಸಹಕರಿಸುವಂತೆ ಕೋರಿಕೊಂಡಿದ್ದು, ಅದರಂತೆ ನಾನು ಚಾಸಾ-1 ರವರೊಂದಿಗೆ ಕೊಡಪಾಡಿ ಜಂಕ್ಷನ್ ಗೆ ತಲುಪಿ ಚಾಸಾ-1 ರವರು ಕೊಡಪಾಡಿಯಲ್ಲಿರುವ ಪಂಚರಾದ ಚಾಸಾ-3 ಮತ್ತು 4 ರವರಿಗೆ ಮಾಹಿತಿಯನ್ನು ನೀಡಿ ದಾಳಿ ಸಹಕರಿಸುವಂತೆ ತಿಳಿಸಿದ ಮೇರೆಗೆ ನಾವು ಖಾಸಗಿ ವಾಹನದಲ್ಲಿ ಹೋಗಿದ್ದು, ಚಾಸಾ-3 ಮತ್ತು 4 ರವರು ಅವರ ವಾಹನದಲ್ಲಿ ಹಿಂಬಾಲಿಸಿರುತ್ತಾರೆ.

ನಂತರ ಸಂಜೆ 6 ಗಂಟೆ ಸುಮಾರಿಗೆ 2ನೇ ಆರೋಪಿ ಮನೆಗೆ ಹೋಗಿ ನೋಡಲಾಗಿ ಆತನ ಬಾಡಿಗೆ ಮನೆಯಲ್ಲಿ ಅಕ್ರಮವಾಗಿ ಅನ್ನ ಭಾಗ್ಯ ಯೋಜನೆಯ ಅಕ್ಕಿ ದಾಸ್ತಾನು ಇರಿಸಿರುವುದು ಕಂಡು ಬಂದಿದ್ದು, ಚಾಸಾ-1 ರವರು ಆ ಬಗ್ಗೆ ದಾಖಲಾತಿಗಳನ್ನು

ಕೇಳಲಾಗಿ, ಆತ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ತಾನು ಮತ್ತು 1ನೇ ಆರೋಪಿ ಬೇರೆಯವರಿಂದ ಕಡಿಮೆ ಬೆಲೆಗೆ ಅಕ್ಕಿಯನ್ನು ಪಡೆದು ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ದಾಸ್ತಾನು ಇರಿಸಿರುವುದಾಗಿ ಹೇಳಿದ ಮೇರೆಗೆ ಚಾಸಾ-1 ರವರು ಮಾಪನವನ್ನು ತರಿಸಿ ದಾಸ್ತಾನು ಕೊಠಡಿಯಲ್ಲಿ ಇದ್ದ 26 ಚೀಲಗಳು ಕಂಡು ಬಂದಿದ್ದು, ಅದು ಬೆಳ್ತಿಗೆ ಅಕ್ಕಿ ಆಗಿರುತ್ತದೆ. ಪ್ರತಿ ಚೀಲದಲ್ಲಿ 50 ಕೆ.ಜಿ ಅಕ್ಕಿ ಇದ್ದು, ಪ್ರತಿ ಚೀಲದಿಂದ 100 ಗ್ರಾಂ ಅಕ್ಕಿಯನ್ನು ಪ್ರತ್ಯೇಕಗೊಳಿಸಲಾಗಿರುತ್ತದೆ. ಒಟ್ಟು 1300 ಕೆ.ಜಿ ಅಕ್ಕಿ ಇರುವುದು ಕಂಡು ಬಂದಿರುತ್ತದೆ.

ಉಳಿದ ಅಕ್ಕಿಯನ್ನು ವಶಕ್ಕೆ ಪಡೆದು ಪಂಚನಾಮೆಯನ್ನು ಸಂಜೆ 6-05 ರಿಂದ 7-05 ಗಂಟೆಯವರೆಗೆ ಜರುಗಿಸಿ ಪಂಚರ ಸಹಿಗಳನ್ನು ಪಡೆದು ಪೋಟೋ ತೆಗೆದು ನಾನು ಸಹಿ ಮಾಡಿರುತ್ತೇನೆ. ನಂತರ ಅಕ್ಕಿ ಮತ್ತು ಆರೋಪಿಯನ್ನು ವಶಕ್ಕೆ ಪಡೆದು ಠಾಣೆಗೆ ಹಾಜರುಪಡಿಸಿರುತ್ತೇವೆ. ಈ ಬಗ್ಗೆ ತನಿಖಾಧಿಕಾರಿಯವರು ನನ್ನನ್ನು ವಿಚಾರಿಸಿ ನನ್ನ ಹೇಳಿಕೆ ಪಡೆದಿರುತ್ತಾರೆ. ಪೋಟೋ ತೆಗೆದ ಬಗ್ಗೆ ಅದನ್ನು ಪ್ರತಿಯನ್ನಾಗಿ ಪರಿವರ್ತಿಸಿದ ಬಗ್ಗೆ ಭಾರತೀಯ ಸಾಕ್ಷಿ ಅಧಿನಿಯಮದ ಕಲಂ 65ಬಿರಡಿಯಲ್ಲಿ ದೃಡೀಕರಣವನ್ನು ವಿತರಿಸಿರುತ್ತೇನೆ.

ಸಾಕ್ಷಿ ಪಂಚನಾಮೆ ಮತ್ತು ಪೋಟೋ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಮತ್ತು 2 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 2ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**(ವಶಕ್ಕೆ ಪಡೆದ ವಸ್ತುಗಳು ಕಂಡು ಬಾರದ ಕಾರಣ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ. ದ. ನ್ಯಾ. ದಂ. ಕುಂದಾಪುರ**